**ಇಂದು ದಿನಾಂಕ:09.06.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಸಿ.ಕೆ.ಎಂ.ವಕೀಲರಿಂದಃ**

ಈ ಕೇಸನ್ನು ನಾನು ಮತ್ತು ಪೋತೇಗೌಡ ಸೇರಿ ಸಣ್ಣಶೆಟ್ಟಿ ಮತ್ತು ಹವಳಶೆಟ್ಟಿ ವಿರುದ್ದ ಹಾಕಿದ್ದೇವೆ. ಯಾವ ಯಾವ ಸರ್ವೆ ನಂಬರ್ ಗಳ ಮೇಲೆ ಕೇಸು ಹಾಕಿದ್ದೇವೆ ಎಂದು ಹೇಳಲು ಆಗುವುದಿಲ್ಲ. ಸ.ನಂ.32/3 ರ ಮೇಲೆ ಕೇಸು ಹಾಕಿದ್ದೇವೆ ಎಂದರೆ ಸರಿ. ಸರ್ವೆ ನಂಬರ್ 32/3 ಹೆಚ್.ಪಿ.ಶಿವಣ್ಣ ಬಿನ್ ಪುಟ್ಟೇಗೌಡರ ಹೆಸರಿನಲ್ಲಿದೆ ಎಂದರೆ ಸರಿ. ಈ ಕೇಸಿನಲ್ಲಿ ಹೆಚ್.ಪಿ.ಶಿವಣ್ಣ ಬಿನ್ ಪುಟ್ಟೇಗೌಡರನ್ನು ಸೇರಿಸಿಲ್ಲ ಎಂದರೆ ಸರಿ. ಸ.ನಂ.32/4 ರ ಮೆಲೇ ಕೇಸು ಹಾಕಿದ್ದೇವೆ ಎಂದರೆ ಸರಿ. ದಾವಾ ಸರ್ವೆ ನಂಬರ್ 32/4 ಪುಷ್ಪ ಕೋಂ ಸುಬ್ಬಣ್ಣನವರ ಹೆಸರಿನಲ್ಲಿದೆ ಎಂದರೆ ಸರಿ, ಅವರನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ಸ.ನಂ.32/9 ಮಹದೇವಿ ಕೋಂ ಮಹದೇವ ಹೆಸರಿನಲ್ಲಿದೆ ಎಂದರೆ ಸರಿ, ಅವರನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ಅಪ್ಪಾಜಿಗೌಡರಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣುಮಕ್ಕಳು. ಅವರೆಂದರೆ ಪೋತೇಗೌಡ, ಕಾಳಪ್ಪ, ನಿಂಗಪ್ಪ, ಕರಗಮ್ಮ, ನಿಂಗಮ್ಮ. ಈಗ ಹೇಳಿದ 3 ಜನ ಗಂಡು ಮಕ್ಕಳ ಪೈಕಿ ಕಾಳಪ್ಪ ಮಾತ್ರ ಬದುಕಿದ್ದಾರೆ. ಸದರಿ ಕಾಳಪ್ಪನವರನ್ನು ಈ ಕೇಸಿನಲ್ಲಿ ಸೇರಿಸಿಲ್ಲ. ಪೋತೇಗೌಡರಿಗೆ ಒಬ್ಬ ಗಂಡು ಮಗ, 3 ಜನ ಹೆಣ್ಣು ಮಕ್ಕಳು. ಅವರೆಂದರೆ ಪೋತಪ್ಪ, ಗೌರಮ್ಮ, ನಿಂಗಮ್ಮ, ಸಣ್ಣಮ್ಮ. ಲೇಟ್ ಪೋತೇಗೌಡರ ಪತ್ನಿಯ ಹೆಸರು ಕಾಳಮ್ಮ ಅವರು ತೀರಿಕೊಂಡಿದ್ದಾರೆ. ಪೋತೇಗೌಡರ ಹೆಣ್ಣು ಮಕ್ಕಳನ್ನು ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ನಿಂಗೇಗೌಡರು ಮದುವೆಯಾಗದೇ ತೀರಿಕೊಂಡಿದ್ದಾರೆ. ಕಾಳಪ್ಪನ ಪತ್ನಿ ಜವರಮ್ಮ ಬದುಕಿದ್ದಾರೆ. ಅವರನ್ನು ಸಹ ಈ ಕೇಸಿನಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ. ದಾವಾ ಸರ್ವೆ ನಂಬರ್ ಗಳಲ್ಲಿ ಎಷ್ಟೆಷ್ಟು ಎಕರೆ ವಿಸ್ತೀರ್ಣ ಇದೆ ಎಂದು ಹೇಳಲು ಗೊತ್ತಿಲ್ಲ. ಬೇರೆ ಬೇರೆ ಚೆಕ್ಕುಬಂಧಿಗಳ ಒಳಗೆ ಉಳುಮೆ ಮಾಡುತ್ತಿದ್ದಾರೆ. ದಾವಾ ಸರ್ವೆ ನಂಬರ್ ಗಳಿಗೆ ಪ್ರತ್ಯೇಕವಾಗಿ ಚೆಕ್ಕುಬಂಧಿ ಹೇಳಲು ಗೊತ್ತಿಲ್ಲ. ಸ.ನಂ.32/2 ಎ ರಲ್ಲಿ 13 ಎಕರೆ 14 ಗುಂಟೆ ವಿಸ್ತೀರ್ಣ ಇದೆ. ಸ.ನಂ.32/2 ಬಿ ನಲ್ಲಿ ಎಷ್ಟು ವಿಸ್ತೀರ್ಣ ಇದೆ ಎಂದು ಹೇಳಲು ಗೊತ್ತಿಲ್ಲ. ಸ.ನಂ.32/2 ಎ ಗೆ ಯಾರು ಮಾಲೀಕರು ಮತ್ತು ಯಾರು

ಸ್ವಾಧೀನವಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಸ.ನಂ.32/2 ಬಿ ಗೆ ಯಾರು ಮಾಲೀಕರು ಮತ್ತು ಯಾರು ಸ್ವಾಧೀನವಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಸ.ನಂ.32/1, 32/3 ರಿಂದ 32/17 ರ ಜಮೀನುಗಳಿಗೆ ವೀರಪ್ಪಶೆಟ್ಟಿ ಮಾಲೀಕರಾಗಿದ್ದಾರೆ. ಈ ವಿಷಯಗಳನ್ನು ಕೇಸು ಹಾಕುವಾಗ ನಮ್ಮ ವಕೀಲರಿಗೆ ಹೇಳಿ ಬರೆಸಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಏಕೆಂದರೆ ನನಗೆ ಓದಲು ಬರುವುದಿಲ್ಲ. ನಾನು ಪ್ರತಿವಾದಿಗಳ ವಿರುದ್ಧ ಸುಳ್ಳು ಕೇಸು ಹಾಕಿ ಸುಳ್ಳು ದಾಖಲೆಗಳನ್ನು ಹಾಜರುಪಡಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**